## ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 2284 |
| ಸದಸ್ಯರು ಹೆಸರು | : | ಶ್ರೀ ಡಿ.ಎಸ್ ಅರುಣ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸಬೇಕಾದ ದಿನಾಂಕ | : | 26.03.2026 |
| ಉತ್ತರಿಸುವ ಸಚಿವರು | : | ಗೃಹ ಸಚಿವರು. |

| ಕ್ರಸಂ | ಪ್ರಶ್ನೆ | ಉತ್ತರ |
|---|---|---|
| ಅ | ಕಳೆದ ಮೂರು ವರ್ಷಗಳಲ್ಲಿ ಪ್ರೇಮದ ಮೂಲಕ ಧರ್ಮಾಂತರ ಆರೋಪಗಳು (ಲವ್ ಜಿಹಾದ್) ಸಂಬಂಧಿತವಾಗಿ ದಾಖಲಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು; ಜಿಲ್ಲಾವಾರು ವಿವರ ಹಾಗೂ ಪ್ರಕರಣಗಳ ಪ್ರಸ್ತುತ ಸ್ಥಿತಿ (ಮೇಲ್ವಿಚಾರಣೆ ಹಂತ, ಶಿಕ್ಷೆ ಹಾಗೂ ಖುಲಾಸೆ) ಕುರಿತು ಸಂಪೂರ್ಣ ಮಾಹಿತಿ ನೀಡುವುದು; | ಪ್ರೇಮದ ಮೂಲಕ ಧರ್ಮಾಂತರ ಆರೋಪಗಳ (ಲವ್ ಜಿಹಾದ್) ಯಾವುದೇ ಪ್ರಕರಣಗಳು ದಾಖಲಾಗಿರುವುದಿಲ್ಲ. ಆದರೆ Karnataka Protection of Right to Freedom of Religion Act, 2022 ಅಡಿಯಲ್ಲಿ ಪ್ರಕರಣಗಳು ದಾಖಲಾಗಿವೆ.<br>ಇಂತಹ ಪ್ರಕರಣಗಳಲ್ಲಿ ಪೊಲೀಸ್ ಇಲಾಖೆ ಕೈಗೊಂಡಿರುವ ಪ್ರಮುಖ ಕ್ರಮಗಳು ಈ ಕೆಳಗಿನಂತಿವೆ:-<br>**ದೂರು ಬಂದ ತಕ್ಷಣ ಪ್ರಕರಣ ದಾಖಲಿಕೆ:** ಬಲವಂತದ ಮತಾಂತರ, ಮರುಳುಗೊಳಿಸಿ ವಿವಾಹ, ಅಪ್ರಾಪ್ತೆಯರೊಂದಿಗೆ ಸಂಪರ್ಕ ಹೊಂದಿರುವ ಬಗ್ಗೆ ದೂರು ಬಂದ ತಕ್ಷಣವೇ ಸಂಬಂಧಪಟ್ಟ ಕಾನೂನುಗಳಡಿ (ಬಿಎನ್‌ಎಸ್ /ಪೋಕ್ಸೋ ಕಾಯಿದೆ ಮೊದಲಾದವು) ಪ್ರಕರಣಗಳನ್ನು ದಾಖಲಿಸಿ ತನಿಖೆ ನಡೆಸಲಾಗುತ್ತಿದೆ.<br>**ಅಪ್ರಾಪ್ತೆಯರ ರಕ್ಷಣೆ:** ಅಪ್ರಾಪ್ತೆಯರೊಂದಿಗೆ ಸಂಪರ್ಕ ಹೊಂದಿರುವ ಪ್ರಕರಣಗಳಲ್ಲಿ ಪೋಕ್ಸೋ ಕಾಯಿದೆಯಡಿ ಕಠಿಣ ಕ್ರಮ ಕೈಗೊಂಡು ಆರೋಪಿಗಳನ್ನು ಬಂಧಿಸುವುದು ಹಾಗೂ ಮಕ್ಕಳ ರಕ್ಷಣೆಗಾಗಿ ಚೈಲ್ಡ್ ವೆಲ್ಫೇರ್ ಕಮಿಟಿ (ಸಿಡಬ್ಲ್ಯೂಸಿ) ಜೊತೆ ಸಮನ್ವಯ ಸಾಧಿಸಲಾಗುತ್ತಿದೆ.<br>**ಬಲವಂತದ ಮತಾಂತರ ತಡೆ:** ರಾಜ್ಯದಲ್ಲಿ ಜಾರಿಯಲ್ಲಿರುವ ಸಂಬಂಧಿತ ಕಾಯಿದೆಗಳ ಪ್ರಕಾರ ಬಲವಂತ, ಮರುಳು ಅಥವಾ ಆಮಿಷ ನೀಡಿ ಮತಾಂತರ ಮಾಡಿಸುವ ಪ್ರಯತ್ನಗಳ ಬಗ್ಗೆ ಮಾಹಿತಿ ದೊರೆತರೆ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ.<br>**ಜಾಗೃತಿ ಕಾರ್ಯಕ್ರಮಗಳು:** ಯುವಕರು ಮತ್ತು ವಿದ್ಯಾರ್ಥಿಗಳು ಇಂತಹ ಮೋಸಗಳಿಗೆ ಒಳಗಾಗದಂತೆ ಶಾಲೆ, ಕಾಲೇಜುಗಳು ಮತ್ತು ಸಾರ್ವಜನಿಕ ಸ್ಥಳಗಳಲ್ಲಿ ಜಾಗೃತಿ ಕಾರ್ಯಕ್ರಮಗಳನ್ನು ಇಲಾಖೆ ನಡೆಸುತ್ತಿದೆ.<br>**ನಿಗಾವಹಣೆ ಮತ್ತು ಮಾಹಿತಿ ಸಂಗ್ರಹಣೆ:** ಸಂಶಯಾಸ್ಪದ ಚಟುವಟಿಕೆಗಳ ಬಗ್ಗೆ ಗುಪ್ತ ಮಾಹಿತಿ ಸಂಗ್ರಹಿಸಿ, ಅಗತ್ಯವಿದ್ದಲ್ಲಿ ಮುನ್ನೆಚ್ಚರಿಕಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br>**ಪೋಷಕರು ಮತ್ತು ಸಾರ್ವಜನಿಕರ ಸಹಕಾರ:** ಇಂತಹ ಘಟನೆಗಳನ್ನು ತಡೆಯಲು ಪೋಷಕರು ಹಾಗೂ ಸಾರ್ವಜನಿಕರು ಪೊಲೀಸ್ ಇಲಾಖೆಗೆ ಮಾಹಿತಿ ನೀಡುವಂತೆ ಮನವಿ ಮಾಡಲಾಗುತ್ತಿದೆ.<br>ಒಟ್ಟಾರೆಯಾಗಿ, ಬಲವಂತದ ಮತಾಂತರ, ಮರುಳುಗೊಳಿಸಿ ವಿವಾಹ ಹಾಗೂ ಅಪ್ರಾಪ್ತೆಯರೊಂದಿಗೆ ಅನೈತಿಕ ಸಂಪರ್ಕ ಹೊಂದುವಂತಹ ಘಟನೆಗಳನ್ನು ತಡೆಯಲು ಕಾನೂನುಬದ್ಧವಾಗಿ ಕಠಿಣ ಕ್ರಮಗಳನ್ನು ಕೈಗೊಂಡು ಸಮಾಜದಲ್ಲಿ ಕಾನೂನು ಸುವ್ಯವಸ್ಥೆಯನ್ನು ಕಾಪಾಡುತ್ತಿದೆ. |
| ಆ | ಇಂತಹ ಪ್ರಕರಣಗಳಲ್ಲಿ ಬಲವಂತದ ಮತಾಂತರ ಮರುಳುಗೊಳಿಸಿ ವಿವಾಹ, ಅಪ್ರಾಪ್ತೆಯರ ಸಂಪರ್ಕ ಮೊದಲಾದ ಅಂಶಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇವುಗಳನ್ನು ತಡೆಯಲು ಪೊಲೀಸ್ ಇಲಾಖೆ ಕೈಗೊಂಡಿರುವ ಕ್ರಮಗಳೇನು; (ಸಂಪೂರ್ಣ ಮಾಹಿತಿ ನೀಡುವುದು) | |

೩

ರಾಜ್ಯದಲ್ಲಿ ಅನಧಿಕೃತ ಅಥವಾ ಬಲವಂತದ ಮತಾಂತರ ಪ್ರಕರಣಗಳನ್ನು ತಡೆಗಟ್ಟುವ ಉದ್ದೇಶದಿಂದ ಜಾರಿಗೊಂಡಿರುವ Karnataka Protection of Right to Freedom of Religion Act, 2022 ಅಡಿಯಲ್ಲಿ ಇದುವರೆಗೆ ದಾಖಲಾದ ಪ್ರಕರಣಗಳ ಸಂಖ್ಯೆ ಎಷ್ಟು; ಅದರಲ್ಲಿ ಎಷ್ಟು; ಪ್ರಕರಣಗಳಲ್ಲಿ ಶಿಕ್ಷೆ ವಿಧಿಸಲಾಗಿದೆ; (ಜಿಲ್ಲಾವಾರು ವಿವರ ನೀಡುವುದು)

ರಾಜ್ಯದಲ್ಲಿ ಅನಧಿಕೃತ ಅಥವಾ ಬಲವಂತದ ಮತಾಂತರ ಪ್ರಕರಣಗಳನ್ನು ತಡೆಗಟ್ಟುವ ಉದ್ದೇಶದಿಂದ ಜಾರಿಗೊಂಡಿರುವ Karnataka Protection of Right to Freedom of Religion Act, 2022 ಅಡಿಯಲ್ಲಿ ದಾಖಲಾದ ವರ್ಷವಾರು ಹಾಗೂ ಜಿಲ್ಲಾವಾರು ಪ್ರಕರಣಗಳ ಅಂಕಿ-ಅಂಶ ಕೆಳಗಿನಂತಿದೆ:-

| **ಘಟಕ** | **Karnataka Protection of Right to Freedom of Religion Act, 2022 ಅಡಿಯಲ್ಲಿ ದಾಖಲಾದ ಪ್ರಕರಣಗಳ ಸಂಖ್ಯೆ** | | | |
|---|---|---|---|---|
| | **2023** | **2024** | **2025** | **2026** |
| ಬೆಂಗಳೂರು ನಗರ | 4 | 1 | 2 | 0 |
| ಕಲಬುರಗಿ ನಗರ | 0 | 1 | 0 | 0 |
| ಮೈಸೂರು ಜಿಲ್ಲೆ | 1 | 0 | 0 | 0 |
| ಕೊಡಗು ಜಿಲ್ಲೆ | 1 | 0 | 0 | 0 |
| ಶಿವಮೊಗ್ಗ ಜಿಲ್ಲೆ | 0 | 0 | 1 | 0 |
| ಚಿತ್ರದುರ್ಗ ಜಿಲ್ಲೆ | 2 | 0 | 0 | 0 |
| ಹಾವೇರಿ ಜಿಲ್ಲೆ | 1 | 0 | 0 | 0 |
| ಬೆಳಗಾವಿ ಜಿಲ್ಲೆ | 0 | 1 | 0 | 0 |
| ಗದಗ ಜಿಲ್ಲೆ | 1 | 0 | 1 | 0 |
| **ಒಟ್ಟು** | **10** | **3** | **4** | **0** |

ದಾಖಲಾದ 17 ಪ್ರಕರಣಗಳಲ್ಲಿ 03 ಪ್ರಕರಣಗಳು ತನಿಖೆಯಲ್ಲಿದ್ದು, 07 ಪ್ರಕರಣಗಳು ನ್ಯಾಯಾಲಯದ ವಿಚಾರಣೆಯಲ್ಲಿರುತ್ತವೆ. 03 "ಬಿ" ಅಂತಿಮ ವರದಿಯಾಗಿದ್ದು, ಉಳಿದಂತೆ ಯಾವುದೇ ಪ್ರಕರಣಗಳಲ್ಲಿ ಶಿಕ್ಷೆಯಾಗಿರುವುದಿಲ್ಲ.

ಅನಧಿಕೃತ ಅಥವಾ ಬಲವಂತದ ಮತಾಂತರ ಪ್ರಕರಣಗಳನ್ನು ನಿಯಂತ್ರಿಸಲು ಈ ಕುರಿತು ಕೆಳಗಿನಂತೆ ಮುಂಜಾಗ್ರತಾ ಕ್ರಮ ಕೈಗೊಳ್ಳಲಾಗಿದೆ:-

- ಠಾಣಾ ವ್ಯಾಪ್ತಿಯಲ್ಲಿ ಶಾಂತಿ ಸಭೆ, ಯುವಜನ ಸಭೆ, ಮೊಹಲ್ಲಾ ಮೀಟಿಂಗ್, ನಾಗರೀಕ ಸಮಿತಿ ಸಭೆಗಳನ್ನು ನಡೆಸಿ ಸಾರ್ವಜನಿಕರಿಗೆ ಮತ್ತು ಯುವಕರಿಗೆ ತಿಳುವಳಿಕೆಗಳನ್ನು ನೀಡಲಾಗುತ್ತಿದೆ ಹಾಗೂ ವೃತ್ತ ಉಪ ವಿಭಾಗ, ಜಿಲ್ಲಾ ಮಟ್ಟದಲ್ಲಿಯೂ ಸಹ ಸಭೆಗಳನ್ನು ಕೈಗೊಳ್ಳಲಾಗುತ್ತಿದೆ.
- ಪ್ರತಿ ಠಾಣಾ ವ್ಯಾಪ್ತಿಯಲ್ಲಿ ಗಸ್ತು, 112 ಹೊಯ್ಸಳ ವಾಹನದಲ್ಲಿ ದಿನದ 24 ಗಂಟೆಯೂ ಅಧಿಕಾರಿ, ಸಿಬ್ಬಂದಿಯವರು ರೌಂಡ್ಸ್, ಗಸ್ತು ಕರ್ತವ್ಯದಲ್ಲಿ ನಿರತರಾಗಿದ್ದಾರೆ.
- ಕಾನೂನು ಮತ್ತು ಸುವ್ಯವಸ್ಥೆಗೆ ಭಂಗ ತರುವ ವ್ಯಕ್ತಿಗಳು/ ಸಂಘಟನೆಗಳು/ಸಾಮಾಜಿಕ ಜಾಲತಾಣಗಳ ಬಗ್ಗೆ ಸತತ ನಿಗಾ ಇಡಲಾಗಿದೆ.

| | | |
|---|---|---|
| | | • ಠಾಣಾ ವ್ಯಾಪ್ತಿಯಲ್ಲಿ ರಾತ್ರಿ ಬೀಟ್ ಮತ್ತು ಶುಭೋದಯ (ಗುಡ್ ಮಾರ್ನಿಂಗ್) ಬೀಟುಗಳನ್ನು ಕೈಗೊಳ್ಳಲಾಗಿದೆ. ಏಕ ಕಾಲದಲ್ಲಿ ಜಿಲ್ಲಾ ವ್ಯಾಪ್ತಿಯಲ್ಲಿ ಕ್ಷಿಪ್ರ ವಾಹನ ತಪಾಸಣೆಗಳನ್ನು ಕೈಗೊಳ್ಳಲಾಗಿದೆ.<br><br>• ಮತೀಯ ಗೂಂಡಾಗಳು ಕಂಡುಬಂದಲ್ಲಿ ಆರೋಪಿಗಳನ್ನು ಗುರುತಿಸಿ ರೌಡಿ ಪಟ್ಟಿಯನ್ನು ದಾಖಲಿಸಿ, ಸದರಿಯವರನ್ನು ಗಡಿಪಾರು ಮಾಡಲಾಗಿರುತ್ತದೆ.<br><br>• ಹಬ್ಬ-ಹರಿದಿನಗಳಲ್ಲಿ ಎಲ್ಲಾ ಕೋಮಿನ ಮುಖಂಡರನ್ನು ಸೇರಿಸಿ ಶಾಂತಿ ಸಭೆ, ಮೊಹಲ್ಲಾ ಮೀಟಿಂಗ್, ಯುವಕರ ಸಭೆ ಹಾಗೂ ಸಾರ್ವಜನಿಕರಿಗೆ ಕಾನೂನಿನ ಅರಿವು ಮೂಡಿಸುವುದು.<br><br>• ಎಲ್ಲಾ ಸಮಾಜದ ಮುಖಂಡರಿಗೆ/ ಯುವಕರಿಗೆ ಹಬ್ಬ ಹರಿದಿನಗಳಲ್ಲಿ ಕರೆಯಿಸಿ ಶಾಂತಿ ಸಭೆಗಳನ್ನು ಕೈಗೊಂಡು ಸೂಕ್ತ ತಿಳುವಳಿಕೆ ನೀಡುತ್ತಾ ಬರಲಾಗುತ್ತಿದೆ.<br><br>• ಮೇಲ್ಕಂಡ ಎಲ್ಲಾ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗುತ್ತಿದ್ದು, ಯಾವುದೇ ಧಾರ್ಮಿಕ ಮತಾಂತರದ ಬಗ್ಗೆ ಮಾಹಿತಿ ಕಂಡು ಬಂದಲ್ಲಿ ತಕ್ಷಣ ಪ್ರಕರಣ ದಾಖಲಿಸಿ ಹಿರಿಯ ಪೊಲೀಸ್ ಅಧಿಕಾರಿರವರು ಸ್ಥಳಕ್ಕೆ ಭೇಟಿ ನೀಡಿ ಅಪರಾಧಿಯನ್ನು ದಸ್ತಗಿರಿ ಮಾಡಿ ಸೂಕ್ತ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು.<br><br>• ಇಂತಹ ಪ್ರಕರಣಗಳು ಕಂಡುಬಂದಲ್ಲಿ ಪ್ರಕರಣವನ್ನು ದಾಖಲಿಸಲಾಗುತ್ತಿದೆ. |
| ಈ | ಸಾಮಾಜಿಕ ಜಾಲತಾಣಗಳ ಮೂಲಕ ಯುವತಿಯರನ್ನು ಗುರಿಯಾಗಿಸಿಕೊಂಡು ಪ್ರಲೋಭನೆ, ಬೆದರಿಕೆ ಅಥವಾ ಮರುಳು ಮಾಡುವ ಸಂಘಟಿತ ಜಾಲಗಳು ಕಾರ್ಯನಿರ್ವಹಿಸುತ್ತಿವೆ ಎಂಬ ವರದಿಗಳು ಸರ್ಕಾರದ ಗಮನಕ್ಕೆ ಬಂದಿದೆಯೇ; ಬಂದಿದ್ದರೆ, ಇಂತಹ ಜಾಲಗಳನ್ನು ಪತ್ತೆಹಚ್ಚಲು ವಿಶೇಷ ದಳ ರಚಿಸುವ ಕುರಿತು ಸರ್ಕಾರದ ಯೋಜನೆ ಇದೆಯೇ? | ಸಾಮಾಜಿಕ ಜಾಲತಾಣಗಳ ಮೇಲೆ ನಿಗಾವಹಿಸಲು ಠಾಣಾ ಮಟ್ಟದಲ್ಲಿ ಹಾಗೂ ಜಿಲ್ಲಾ ಮಟ್ಟದಲ್ಲಿ ಸೋಷಿಯಲ್ ಮೀಡಿಯಾ ಸೆಲ್ ಅನ್ನು ತೆರೆದಿದ್ದು, ದಿನದ 24 ಗಂಟೆಯೂ ಸಾಮಾಜಿಕ ಜಾಲತಾಣಗಳನ್ನು ಪತ್ತೆ ಹಚ್ಚುವ ಕರ್ತವ್ಯ ಪ್ರಗತಿಯಲ್ಲಿರುತ್ತದೆ.<br><br>ಈ ಸಂಬಂಧ ನಿರಂತರವಾಗಿ ಇಂತಹ ಖಾತೆಗಳ ಮೇಲೆ ತೀವ್ರ ನಿಗಾವಹಿಸಲಾಗುತ್ತಿದೆ.<br><br>ಒಂದು ವೇಳೆ ಅಂತಹ ಜಾಲಗಳು ಕಂಡು ಬಂದಲ್ಲಿ ಅವುಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು.<br><br>ಇಂತಹ ಜಾಲಗಳನ್ನು ಪತ್ತೆಹಚ್ಚಲು ವಿಶೇಷ ದಳ ರಚಿಸುವ ಕುರಿತಂತೆ ಯಾವುದೇ ಪ್ರಸ್ತಾವನೆ ಇರುವುದಿಲ್ಲ. |

ಹೆಚ್‌ಡಿ 209 ಎಸ್‌ಎಸ್‌ಟಿ 2026

(ಡಾ: ಜಿ.ಪರಮೇಶ್ವರ)
ಗೃಹ ಸಚಿವರು.